

**◆ ಮುಂದೆ ನೀವು ಎರಡು ಸಾವಿರದ ಇಸವಿಯ ನಂತರದಲ್ಲಿ ಪಂಪನನ್ನು ಕುರಿತು ಕಥೆ ಮಾಡಿದ್ರಿ. ಪಂಪ, ರನ್ನರನ್ನು ಕುರಿತು ಜನಕಥಾಕೀರ್ತನ ಮಾಡಬೇಕು ಅಂತ ಯಾಕೆ ಅನಿಸಿತು?**

ಇಲ್ಲಿ ಎಸ್.ಜಿ. ಸಿದ್ಧರಾಮಯ್ಯ ಮತ್ತು ರಾಜಪ್ಪ ದಳವಾಯಿಯವರನ್ನು ನೆನಪಿಸಿಕೊಳ್ಳಬೇಕು. ಅಷ್ಟೊತ್ತಿಗಾಗಲೇ ನಾನು, ಸೋಮಣ್ಣ, ಎಸ್.ಜಿ.ಎಸ್, ಕೆ. ಪರಮಶಿವಯ್ಯ ನಮ್ಮದೆಲ್ಲ ಒಂದು ಗುಂಪು ತುಮಕೂರಲ್ಲಿ. ರಾತ್ರಿ ಹೊತ್ತು ಮಾತಾಡಿಕೊಂಡು ಕುಳಿತುಕೊಳ್ಳುತ್ತಿದ್ದವು. ಅಷ್ಟೊತ್ತಿಗಾಗಲೇ ಬಾಬಾ ಸಾಹೇಬರ ಕಥೆ ಮಾಡಿದ್ನಲ್ಲ ಅದುಕ್ಕೆ ಎಸ್.ಜಿ.ಎಸ್. ಹತ್ರ 'ಪಂಪನ ಕಥೆ ಸ್ವಲ್ಪ ಹೇಳಿಕೊಡಿ ಸಾರ್' ಅಂದೆ. 'ರೀ ಲಕ್ಷ್ಮಣದಾಸ್, ಒಳ್ಳೆ ಚೆನ್ನಾಯ್ತಲ್ಲ... ಹೇಳಿ ಕೊಡ್ತೀನಿ' ಅಂತ 'ವಿಕ್ರಮಾರ್ಜುನ ವಿಜಯ'ದ ನಾಲ್ಕು ಪದ್ಯ, 'ಆದಿಪುರಾಣ'ದ ನಾಲ್ಕೈದು ಪದ್ಯ ಇವನ್ನೆಲ್ಲಾ ಹೇಳಿಕೊಟ್ಟರು. ಪರಮಜಿನೇಂದ್ರವಾಣಿ ಮಂಗಳಕ್ಕೆ ಇಟ್ಕಂಡು ಕಥೆ ಮಾಡ್ದೆ.

ಮುಂದಕ್ಕೆ ರಾಜಪ್ಪ ದಳವಾಯಿಯವರು ಕರೆದೊಯ್ದರು. ಅವರು ರನ್ನನ 'ಸಾಹಸಭೀಮ ವಿಜಯ'ದ ಇಪ್ಪತ್ತೇಳು ಪದ್ಯಗಳನ್ನು ಟಿಕ್ ಮಾಡಿ ಕೊಟ್ಟು ಷರತ್ತು ಹಾಕಿದ್ರು. 'ಇವನ್ನೆಲ್ಲ ಕಂಠಪಾಠ ಮಾಡಬೇಕು, ದೆಹಲಿಗೆ ಹೋಗಿವ್ರಂತೆ' ಅಂದ್ರು. 'ನನಗೆ ಆಗಲ್ಲ ಸ್ವಾಮಿ. ನನಗೆ ಇಷ್ಟೊಂದು ಕಾಟ ಕೊಡ್ತೀರಿ. ಯಾವ ಡೆಲ್ಲಿನೂ ಬೇಡ' ಅಂದೆ. ಬಿಡಲಿಲ್ಲ. 'ಅವೆಲ್ಲಾ ಗೊತ್ತಿಲ್ಲ. ಕರೆಕ್ಟಾಗಿ ಇನ್ನೊಂದು ತಿಂಗಳಲ್ಲಿ ಇಷ್ಟು ಪದ್ಯಗಳನ್ನು ಕಂಠಪಾಠ ಮಾಡಿಕೊಂಡು ನನಗೆ ಒಪ್ಪಿಸಬೇಕು' ಅಂತ ಠರಾವು ಹೊರಡಿಸಿದರು. ಏನು ಮಾಡಲಿ. ರಾತ್ರಿಯೆಲ್ಲಾ ಕೂತು ಕಂಠಪಾಠ ಮಾಡಿ ಒಪ್ಪಿಸಿದೆ. ಅದಾದ ಮೇಲೆ ದೆಹಲಿಯ ಜೆ.ಎನ್.ಯು. ನಲ್ಲಿದ್ದ ಪ್ರೊ. ಪುರುಷೋತ್ತಮ ಬಿಳಿಮಲೆ ಅವರು ನನ್ನನ್ನು ಕರೆಸಿಕೊಂಡು ಆ ವಿಶ್ವವಿದ್ಯಾಲಯದಲ್ಲಿ ರನ್ನನ 'ಸಾಹಸಭೀಮ ವಿಜಯ'ದ ಪದ್ಯಗಳನ್ನು ಹಾಡಿಸಿದ್ರು... ಇಂಥವರ ಸಹವಾಸ, ಸಹಕಾರದಿಂದ 'ಜನಕಥಾಕೀರ್ತನ'ಕ್ಕೆ ಬಂದುಬಿಟ್ಟೆ. ಎಲ್ಲವನ್ನೂ ಕಥೆ ಮಾಡುತ್ತಾಮಾಡುತ್ತಾ ಇಲ್ಲಿಗೆ ಬಂದೆ.

**◆ ರಂಗಭೂಮಿಯಲ್ಲಿ ಕೆಲಸ ಮಾಡಿದ್ರಿ. ಹರಿಕಥೆಯಲ್ಲೂ ಕೆಲಸ ಮಾಡಿದ್ರಿ. ಜನಕಥಾ ಕೀರ್ತನೆ ಆಗಿಸಿದ್ರಿ. ಆಕಾಶವಾಣಿ, ದೂರದರ್ಶನ, ಟೆಲಿಫಿಲ್ಮ್ ಇತ್ಯಾದಿಗಳಲ್ಲಿ ನಟಿಸಿದಿರಿ. ಅದರ ಅನುಭವ ಹೇಗಿತ್ತು?**

1984ರಲ್ಲಿ ಎಚ್.ಕೆ. ನಾರಾಯಣ ಅಂತ ಆಕಾಶವಾಣಿಯಲ್ಲಿದ್ರು. 'ಬಿ'ಗ್ರೇಡ್‌ಗೆ ಕೂತುಕೊಳ್ಳಲು ಅಪ್ಲಿಕೇಶನ್ ಹಾಕ್ದೆ. ಇಂಟರ್‌ವ್ಯೂ ಪತ್ರ ಬಂತು. ಗುರುರಾಜುಲು ನಾಯ್ಡು ಅವರ ಅಣತಿಯಂತೆ ಇಂಟರ್‌ವ್ಯೂಗೆ ಹೋದೆ. ಎಚ್.ಕೆ. ನಾರಾಯಣ್ ಒಳಗಡೆ ಕರೆದು ಒಂದು ಹಾಡು ಹೇಳು ಅಂದ್ರು. ಶ್ರುತಿ ಹೇಳು ಅಂದ್ರು. ಸಿ ಒನ್, ಸಿ ಟು, ಸಿ ತ್ರಿ, ಸಿ ಫೋರ್... ಇಂಗೇ ಹೇಳ್ದೆ. ಹಾಡು ಅಂದ್ರು 'ನಮ್ಮಮ್ಮ ಶಾರದೆ ಉಮಾ ಮಹೇಶ್ವರಿ...' ಹಾಡ್ದೆ. ಪಾಸ್ ಮಾಡುದ್ರು. 'ಬಿ' ಗ್ರೇಡ್ ಆಗೋಯ್ತು. 'ಬಿ' ಗ್ರೇಡ್ ಆದಮೇಲೆ 'ಬಿ ಹೈ' ಆಗಬೇಕು. ಅದು ಆಕಾಶವಾಣಿಯಲ್ಲಿ ಕರೆಕ್ಟಾದ ಡಿಗ್ರಿ. 'ಬಿ ಹೈ' ಆದಮೇಲೆ 'ಎ ಹೈ ಟಾಪ್' ಅಂತ. 'ಬಿ' ಗ್ರೇಡ್ ಮೂರೇ ವರ್ಷ. ಸ್ಟಾಪ್ ಆಗಿಬಿಡುತ್ತೆ. 'ಬಿ ಹೈ' ಮಾಡ್ಕಂಡ್ರೇ ಆಕಾಶವಾಣಿಯಲ್ಲಿ ಯಾವಾಗ್ಲೂ ಹಾಡ್ಬೋದು. 'ಬಿ ಹೈ'ಗೆ ಹಾಕ್ಕಂಡೆ. ಆರ್.ಕೆ. ಪದ್ಮನಾಭ ಅವರು ದೊಡ್ಡ ಸಂಗೀತಗಾರರು. ಅವರ ಹತ್ರ ಆದ್ಮೇಲೆ 'ಬಿ ಹೈ' ಪಾಸಾಯ್ತು. ಆಗ ದೂರದರ್ಶನಕ್ಕೆ ಹೋಗೋಕೆ ಅವಕಾಶ ಆಯ್ತು. ಆಗ ತಾನೇ ದೂರದರ್ಶನ 1990ರಲ್ಲಿ ಎಸ್ಟಾಬ್ಲಿಶ್ ಆಗಿತ್ತು. ಮೊದಲು ಬೆಂಗಳೂರಿನಲ್ಲಿ ಕೆ.ಜಿ.ಐ.ಡಿ. ಆಫೀಸ್‌ನಲ್ಲಿ ಇತ್ತು. ಬಾನಂದೂರು ಕೆಂಪಯ್ಯ ಆಗತಾನೇ ಗುಲ್ಬರ್ಗಾದಿಂದ ಟ್ರಾನ್ಸ್‌ಫರ್ ಆಗಿ ಅಲ್ಲಿಗೆ ಬಂದಿದ್ದರು. ಆಗಿನ ಕಾಲದಲ್ಲಿ ಬೇರೆ ಯಾರೋ ಡೈರೆಕ್ಟರ್ ಇದ್ರು. ಅಷ್ಟೊತ್ತಿಗಾಗಲೇ ಆಕಾಶವಾಣಿಯಲ್ಲಿ ನನ್ನದು 'ಬಿ ಹೈ' ಆಗಿಬಿಟ್ಟಿತ್ತು. ದೂರದರ್ಶನದಲ್ಲಿ ನನಗೆ 'ಎಡೆಯೂರು ಸಿದ್ಧಲಿಂಗೇಶ್ವರ' ನಾಟಕದಲ್ಲಿ ಪಾತ್ರ ಮಾಡಲು ಆಯ್ಕೆ ಆಯ್ತು. ನಾನೂ ಮಾಡ್ದೆ. ಅವಾಗಲಿಂದ